(ಶ್ರೀ ಕೆ. ಎಫ್. ಪಾಟೀಲ್)

18. *Wheat and Wheat Products*.—The State is normally deficit in wheat and wheat products. The Government of India are supplying wheat to the licensed dealers in the State at controlled rates. The State's requirements of maida is estimated at 2,000 tons per month. The entire output of the local wheat flour mills, *viz.*, 1,500 tons per month and 500 tons per month imported from the Madras wheat flour mills are distributed throughout the State at the following controlled rates:—

	In Bangalore Corporation area.	*In mofussil area.*
Stocks of Madras Maida	0·29 nP. per lb.	0·31 nP. per lb.
Stock of Bangalore Maida	0·27 nP. per lb.	0·29 nP. per lb.

19. The entire output of Soji (about 125 tons) of the local flour mills is taken delivery of and distributed through Co-operative Societies.

ಸದ್ಯದ ಪರಿಸ್ಥಿತಿ ಹೀಗಿರುವುದರಿಂದ ಆಹಾರ ಧ್ಯಾನಗಳ Procurementನ್ನು ಆದಷ್ಟು ಬೇಗನೆ ನಿಲ್ಲಿಸಿ ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ, ಪಂಚಾಯ್ತಿಗಳ ಮುಖಾಂತರ ಇಲ್ಲದಿದ್ದರೆ ನಗರ ಸಭೆಗಳ ಮುಖಾಂತರ ನಮ್ಮಲ್ಲಿರುವ ಅಕ್ಕಿಯನ್ನು ಎಲ್ಲೆಲ್ಲ ಬೆರೆ ಏರುತ್ತದೋ ಅಲ್ಲಿ ಹಂಚುವ ವ್ಯವಸ್ಥೆಯನ್ನು ಬೇಗ ಕೈಗೊಳ್ಳುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪೈ. ಎರೇಪ್ಪ.—ಹಾನನ ಡಿಸ್ಟ್ರಿಕ್ಟಿನ ಹೊಳೆನರಸೀಪುರ ತಾಲ್ಲೂಕಿನಲ್ಲಿ ಈಗ ಬೆರೆಗಳು ಎಪರೀತ ಏರುತ್ತಿರುವುದರಿಂದ ಅಲ್ಲಿ ಡಿಪೋ ತೆರೆಯುವ ವ್ಯವಸ್ಥೆಮಾಡುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಈಗಾಗಲೆ ಡೆಪ್ಯುಟಿ ಕಮಿಷನರಿಗೆ ಕಾಗದಬರೆದು, ಅಲ್ಲಿ ಡಿಪೋ ತೆರೆಯುವ ಅವಶ್ಯಕತೆಯಿದ್ದರೆ ಬೇಗ ಒಂದನ್ನು ತೆರೆಯಬೇಕೆಂದು ಹೇಳಿದ್ದೇವೆ.

PAPERS LAID ON THE TABLE

SECRETARY.—I beg to lay on the Table replies to 13 questions of the previous Sessions.

[Placed in the Legislature Library No. 18/L.A., 1959 (Budget].

PRESENTATION OF REPORT OF COMMITTEE ON ASSURANCES.

Sri M. RAMAPPA (Harihar).—I beg to present the First Report of the Committee on Government Assurances.

Mr. DEPUTY SPEAKER.—The Report is presented.

BUDGET ESTIMATES OF THE ELECTRICITY BOARD.

(Discussion continued)

†ಶ್ರೀ ಎಮ್. ಸಿ. ನರಸಿಂಹನ್.—ಸ್ವಾಮಿ, ನಾನು ಹೇಳುವುದರಲ್ಲ ಒಂದೆರಡು ಮಾತುಗಳು ಮಾತ್ರ ಉಳಿದಿವೆ. ಹೆಚ್ಚುಕಾಲ ತೆಗೆದುಕೊಳ್ಳದೆ ಮುಗಿಸುತ್ತೇನೆ. ಎರೆಕ್ಟಿಸಿಟಿ ಬೋರ್ಡಿನ ರಚನೆಯಾದ ನಂತರ ಅದರ ರೆಕ್ಕ ಪತ್ರ ವ್ಯವಹಾರದ ತನಿಖೆಯ ಅಧಿಕಾರ ಯಾವುದೂ ಪಬ್ಲಿಕ್ ಅಕೌಂಟ್ಸ್ ಕಮಿಟಿಗಾಗಲಿ, ಎಸ್ಟಿಮೇಟ್ಸ್ ಕಮಿಟಿಗಾಗಲಿ ಒಳಪಟ್ಟಿರುವುದಿಲ್ಲ. ಆದ್ದರಿಂದ ನನ್ನ ನಲಹೆ ಯಾದರೂ ಇಷ್ಟೆ. ಈ ಶಾಸನ ಸಭೆಗೆ ಈ ಬೋರ್ಡಿನ ರೆಕ್ಕ ಪತ್ರಗಳ ಮೇಲೆ ಹತೋಟಿ ಯಿರಬೇಕು. ಇದಾಗಬೇಕಾದರೆ, ಇದಕ್ಕೊಂದು ವ್ಯವಸ್ಥೆ ಮಾಡುವುದು ಅಗತ್ಯವೆಂದು ಕಂಡುಬರುತ್ತದೆ. ಈಗೆ ನಿದ್ದರೂ, P.W.D ಮಂತ್ರಿಗಳು, ತಾವು ಜವಾಬು ಕೊಡುವ ಜವಾಬ್ದಾರಿ ಹೊತ್ತಿರುವುದಾಗಿ ತಿಳಿಸುತ್ತಾರೆಯೇ ಹೊರತು, ಬಾಕಿ ಅದರ ಯಾವ ವ್ಯವಹಾರದ ವಿಷಯದಲ್ಲಿಯೂ ಹತೋಟಿ ಹೊಂದಿಲ್ಲ ವೆಂದು ಹೇಳಬೇಕಾಗಿದೆ. ಈ ದೃಷ್ಟಿಯಿಂದ ನಾನು ಹೇಳಿದಹಾಗೆ ಒಂದು ಸಮಿತಿಯನ್ನು ರಚನೆಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಆಮೇಲೆ, ಈ ಬೋರ್ಡಿನ 1958-59 ಬಡ್ಜೆಟ್ ನೋಡುವುದಾದರೆ, ಅದಕ್ಕೆ 1958-59ನೆಯ ಸಾಲಿಗೆ ಎಷ್ಟು ನಿಗದಿಯಾಗಿತ್ತೋ ಅದರಲ್ಲ ಸುಮಾರು 20,000 ರೂಪಾಯಿಗಳು ಖರ್ಚಾಗದೆ ಉಳಿದಿದೆ. ಇದಕ್ಕೆ ಕಾರಣ ಬಹುಶಃ ಸಾಕಷ್ಟು ಸಿಬ್ಬಂದಿಯಿಲ್ಲದಿರುವುದೋ ಅಥವಾ Materials ಇಲ್ಲದಿರುವುದೋ ಆಗಿದೆ. ಈ ಬಗ್ಗೆ ಸೂಕ್ತ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಶ್ರೀಮಾನ್ ಮರ್ಲರಾಧ್ಯರು ಹೇಳಿದ ಟ್ಯಾರಿಫ್ ಕಮಿಟಿಯ ರಿಪೋರ್ಟನ್ನು ಜಾರಿಗೆ ಕೊಡಬೇಕೆಂಬ ವಿಷಯ. ಅದನ್ನು ಜಾರಿಗೆ ಕೊಡಬೇಕೆಂಬದರಲ್ಲಿ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ವಿಷಯಕ್ಕೆ ಮಾತ್ರ ನನ್ನ ಭಿನ್ನಾಭಿಪ್ರಾಯ ಎದೆ. ಟ್ಯಾರಿಫ್ ಕಮಿಟಿಯವರು ಶಿಫಾರ್ಸು ಮಾಡಿರುವುದನ್ನು ನೋಡಿದರೆ ವ್ಯವಸಾಯಕ್ಕೆ ಕಷ್ಟವಾಗುತ್ತದೆಂದು ಕಾಣುತ್ತೆ. ಇರಿಗೇಷನ್ ಪಂಪುಸೆಟ್ಟುಗಳಿಗೆ ಅವರು ಶಿಫಾರಸು ಮಾಡಿರುವ ದರಗಳೂ ಈಗಿರುವುದಕ್ಕಿಂತಲೂ ಹೆಚ್ಚಾಗಿರುವಂತೆ ಕಾಣುತ್ತದೆ. ಈಗಿರುವ ಪ್ರಕಾರ ಮೊದಲನ 100ಯೂನಿಟ್‌ಗಳಿಗೆ 5 nP. ಗಳಂತೆಯೂ ಅದಾದ ಮೇಲಿನ ಪ್ರತಿ 100 ಯೂನಿಟ್ಟುಗಳಿಗೆ 3 nP. ಯಂತೆಯೂ ಇರುವುದನ್ನು ಮೊದಲನ 100 ಯೂನಿಟ್‌ಗಳಿಗೆ 8 nP. ಯಂತೆಯೂ, ಅದರ ಮುಂದಿನ ಪ್ರತಿ 100 ಯೂನಿಟ್ಟುಗಳಿಗೆ 6 nP. ಯಂತೆಯೂ ಗೊತ್ತು ಮಾಡಬೇಕೆಂದು